ನಟರಾಜ್ ಹುಳಿಯಾರ್

ಕಲೆ: ಡಿ.ಕೆ. ರಮೇಶ್

# ಪ್ರಭುದೇವಸ್ವಾಮಿಗಳು ಕನಸಿನಲ್ಲಿ ಬಂದು



## 1

ಶ್ರೀಶೈಲದ ಪ್ರಭುದೇವಸ್ವಾಮಿಗಳು ಕನಸಿನಲ್ಲಿ ಬಂದು 'ಇನ್ನು ನಿನ್ನ ಕೊನೆಗಾಲ ಹತ್ತಿರವಾಯಿತಪ್ಪಾ; ಕೈಲಾಸವಾಸಕ್ಕೆ ಸಿದ್ಧನಾಗು' ಎಂದ ತಕ್ಷಣ ಬೆಚ್ಚಿ ಎಚ್ಚರಗೊಂಡ ರುದ್ರಣ್ಣನವರಿಗೆ, 'ಎಲಎಲಾ! ಇದೇನು ಇದ್ದಕ್ಕಿದ್ದಂತೆ ಹೀಗೆ ಸ್ವಾಮಿಗಳ ವಾಕ್ಯವಾಯಿತಲ್ಲಾ!' ಎನ್ನಿಸಿ ಮೈಯೆಲ್ಲ ಅದುರತೊಡಗಿತು. ಚಣ ಬಿಟ್ಟು ಅಳು ಬಂತು. ಈ ಮನೆಹಾಳು ಕನಸನ್ನು ಈ ಗಳಿಗೆಯಲ್ಲಿ ಯಾರ ಜೊತೆಯಾದರೂ ಹೇಳಿಕೊಳ್ಳದಿದ್ದರೆ ಇವತ್ತು ಬೆಳಗಾಗುವುದರೊಳಗೇ ಸತ್ತು ಹೋಗಿಬಿಡಬಹುದೇನೋ ಅನ್ನಿಸಿ ಎದ್ದು ಸುತ್ತ ನೋಡಿದರು. ಮೂರು ದಿನದಿಂದ ಮನೆಯಲ್ಲಿ ಯಾರೂ ಇಲ್ಲವೆಂಬುದು ನೆನಪಾಗಿ, ಇದು ಕೂಡ ಪ್ರಭುದೇವಸ್ವಾಮಿಗಳ ಆದೇಶದ ಪ್ರಕಾರವಾಗಿಯೇ ನಡೆದಿರಬಹುದು ಎಂದು ಭಯವಾಯಿತು. ಅಂದರೆ... ಮನೆಯವರಿಗೆಲ್ಲ ಸ್ವಾಮಿಗಳ ಆದೇಶ ಮೊದಲೇ ತಲುಪಿತ್ತೇನೋ; ಆ ಕಾರಣದಿಂದಲೇ ಅವರೆಲ್ಲರೂ ಮೂರು ದಿನ ಮೊದಲೇ ಊರು ಬಿಟ್ಟಿರಬಹುದೇನೋ ಅನ್ನಿಸಿ ಕೈ ಕಾಲು ತೊಡೆ ನಡುಗತೊಡಗಿದವು. ಈಗಿಂದೀಗ ಯಾರಿಗಾದರೂ ಫೋನು ಮಾಡಿ ವಿಷಯ ಹೇಳಬೇಕೆಂದುಕೊಂಡು ಗೋಡೆ ಗಡಿಯಾರ ನೋಡಿದರು. ಈಚೆಗೆ ಆ ಗಡಿಯಾರವನ್ನೇ ಸರಿಯಾಗಿ ನೋಡಿರಲಿಲ್ಲ. ದೂಳು ಅಡರಿ ಮಸುಕಾಗಿದ್ದ ಗಡಿಯಾರ ಇನ್ನೂ ಮೂರು ಗಂಟೆ ತೋರಿಸುತ್ತಿತ್ತು. ಮಂಚಕ್ಕೆ ತಲೆ ಒರಗಿಸಿಕೊಂಡು